

# ಬಣ್ಣದ ಗಿಣಿ ಅಲ್ಲ; ಆರ್ಕಿಡ್!



ಆರ್ಕಿಡ್ ಹೂವುಗಳ ವೈವಿಧ್ಯವೇ ಹಾಗೆ. ಕೋತಿ ಮೂತಿ ಆಕಾರದ, ಮನುಷ್ಯನಾಕಾರದ, ಸಿಂಹ ಮುಖದ, ಕತ್ತೆ ಮುಖದ ಆಕಾರ.. ಹೀಗೆ ಹತ್ತು ಹಲವು ಆಕಾರ, ಆಕೃತಿಗಳನ್ನು ಹೊಂದಿ ಹೂವು ಬಿಡುತ್ತದೆ. ಇಲ್ಲೊಂದು ಆರ್ಕಿಡ್ ಹೂವು ಬಣ್ಣ ಬಣ್ಣದ ಗಿಣಿಯನ್ನು ಹೋಲುತ್ತದೆ.

ಇಂಪೇಷನ್ ಪ್ಸಿಟ್ಟಾಕಿನಾ ಎಂಬ ವೈಜ್ಞಾನಿಕ ಹೆಸರುಳ್ಳ ಈ ಸಸ್ಯವು ಬಾಲ್ಸಾಮಿನೇಷಿಯೆ ಕುಟುಂಬಕ್ಕೆ ಸೇರಿದ್ದು, ಆಗ್ನೇಯ ಏಷ್ಯಾದ ಸುಗಂಧ ಬೀರುವ ಸಸ್ಯಗಳ ಗುಂಪಿಗೆ ಸೇರಿದೆ. ಹಾರುತ್ತಿರುವ ಗಿಳಿಯನ್ನು ಹೋಲುವ ಹೂಗಳನ್ನು ಅರಳಿಸುವ ಈ ಆರ್ಕಿಡ್ ಸಸ್ಯಗಳನ್ನು ಮೊದಲ ಬಾರಿಗೆ ಜೋಸೆಫ್ ಡಾಲ್ಟನ್ ಹೂಕರ್ ಎಂಬ ಸಸ್ಯಶಾಸ್ತ್ರಜ್ಞ ಪತ್ತೆ ಹಚ್ಚಿದ. ಅವನು ಇದರ ಬೀಜಗಳನ್ನು 1899ರಲ್ಲಿ ರಾಯಲ್ ಗಾರ್ಡನ್‌ಗೆ ಕಳುಹಿಸಿಕೊಟ್ಟ. ಅಲ್ಲಿ ಸಸ್ಯವು 1900ರ ಸುಮಾರಿಗೆ ಹೂವು ಬಿಟ್ಟಿತು. 1901ರಲ್ಲಿ ಜೋಸೆಫ್ ಹೂಕರ್ ಇದರ ಪ್ರಬೇಧದ ಕುರಿತಾಗಿ ಪ್ರಬಂಧ ಮಂಡಿಸಿದ. ಈ ಮೂಲಕ ಜಗತ್ತಿಗೆ ಇದರ ಪರಿಚಯವಾಯಿತು. ಈ ಪ್ರಬೇಧವು ಹೆಚ್ಚಾಗಿ ಥೈಲ್ಯಾಂಡ್, ಬರ್ಮಾ ಮತ್ತು ಭಾರತದ ಕೆಲಭಾಗಗಳಲ್ಲಿಯೂ ಕಂಡುಬರುತ್ತವೆ.

ಗಿಣಿಯಂತೆ ಕಾಣುವ ಈ ಹೂವಿನಲ್ಲಿ ಗಿಣಿಯ ತಲೆಯು ಹೂವಿನ ತಳಭಾಗವಾಗಿದ್ದರೆ, ಪುಕ್ಕವುಳ್ಳ ಬಾಲದಂತೆ ಗೋಚರಿಸುವ ಭಾಗವು ಮುಂಭಾಗದಲ್ಲಿರುತ್ತದೆ. ಹೂವಿನ ಯಾವುದಾದರೂ ಒಂದು ಬದಿಯಿಂದ ನೋಡಿದಾಗ ಮಾತ್ರ ಅದು ಹಾರುತ್ತಿರುವ ಗಿಳಿಯನ್ನು ಹೋಲುತ್ತಿರುವುದು ಕಂಡುಬರುತ್ತದೆ.

ಥೈಲ್ಯಾಂಡ್ ಸರ್ಕಾರ ಈ ತಳಿಯ ಸಸ್ಯಗಳನ್ನು ರಫ್ತು ಮಾಡುವುದನ್ನು ನಿಷೇಧಿಸಿರುವುದರಿಂದ ಸದ್ಯ ಇವುಗಳ ಇಳುವರಿಯು ಥೈಲ್ಯಾಂಡ್ ಹೊರತುಪಡಿಸಿ ಬೇರೆಲ್ಲೂ ಕಂಡುಬರುವುದಿಲ್ಲ.

■ ಪ.ನಾ.ಹಳ್ಳಿ ಹರೀಶ್ ಕುಮಾರ್